Appendice

## ಅನುಬಂಧ

1. ಉತ್ತರ ಕನ್ನಡದ ಮೊದಲ ಸಾಮಾಜಿಕ ನಾಟಕಗಳು
2. ನಾಟಕಕಾರ ಶ್ರೀ ಜಿ.ಜಿ.ಹೆಗಡೆ
3. ಪರಾಮರ್ಶನ ಗ್ರಂಥಗಳು

# 1. ಉತ್ತರಕನ್ನಡದ ಮೊದಲ ಸಾಮಾಜಿಕ ನಾಟಕಗಳು

ಉತ್ತರ ಕನ್ನಡದ ಕರ್ಕಿಯ ಯಕ್ಷಗಾನ ಮೇಳವೊಂದು ಮಹಾರಾಷ್ಟ್ರದಲ್ಲಿ ತನ್ನ ಪ್ರದರ್ಶನ ನೀಡಿ ಅಲ್ಲಿ ಆಧುನಿಕ ರಂಗಭೂಮಿಗೆ ಚಾಲನೆ ನೀಡಿದಂತೆ , ಮಹಾರಾಷ್ಟ್ರದ ಸಾಮಾಜಿಕ ಪರಿಸರ ಮತ್ತು ರಂಗಭೂಮಿ ಉತ್ತರ ಕನ್ನಡದ ಕರ್ಕಿಯವರಿಂದಲೇ ಆಧುನಿಕ ವಾಸ್ತವವಾದಿ ನಾಟಕ ರಚನೆಗೊಳ್ಳುವಂತೆ ಮಾಡಿದ್ದು ವಿಶೇಷ ಸಂಗತಿಯಾಗಿದೆ. ಉತ್ತರ ಕನ್ನಡದಲ್ಲಿ ಯಕ್ಷಗಾನದಂತಹ ಸಾಂಪ್ರದಾಯಿಕ ರಂಗಭೂಮಿ ತುಂಬಾ ಫಲಪ್ರದವಾಗಿದ್ದ ಕಾಲದಲ್ಲೇ ಇಗ್ಗಪ್ಪ ಹೆಗಡೆ, ಕನ್ಯಾ ವಿಕ್ರಯದಂತಹ ಸಾಮಾಜಿಕ ನಾಟಕಗಳು ಇಲ್ಲಿ ಕಾಣಿಸಿಕೊಂಡವು . ಉತ್ತರ ಕನ್ನಡಕ್ಕೆ ತೀರ ಅಪರಚಿತವಾದ ವಾಸ್ತವವಾದಿ ರಂಗಭೂಮಿಗೆ ಸಂಬಂಧಿಸಿದ್ದ ನಾಟಕಗಳು ಇವು .

ಇಂಥದೊಂದು ರಚನೆ ಈ ಜಿಲ್ಲೆಯಲ್ಲಿ ಇದ್ದಕ್ಕಿದ್ದಂತೆ ಹುಟ್ಟಿಕೊಂಡಿಲ್ಲ . ಈ ನಾಟಕಗಳನ್ನು ರಚನೆ ಮಾಡಿದವರು ಉತ್ತರ ಕನ್ನಡದವರೇ ಆದರೂ ಅವರು ಈ ನಾಟಕಗಳನ್ನು ರಚಿಸಿದ್ದು ಮುಂಬೈಯಲ್ಲಿ. ಮುಂಬೈಯಲ್ಲಿ ಆ ಕಾಲದಲ್ಲಿ ಇದ್ದ ಸಾಮಾಜಿಕ ಹಾಗೂ ರಂಗಭೂಮಿಯ ಪರಿಸರ ಇವುಗಳ ರಚನೆಗೆ ಪೂರಕ ನೆಲೆ ಒದಗಿಸಿವೆ. (ಮುಂಬೈ ಪರಿಸರದಲ್ಲಿ ಈ ಕನ್ನಡನಾಟಕಗಳು ಅರಳಿದಬಗೆಯನ್ನು ಕುರಿತ ಮಾಹಿತಿಗಾಗಿ ನಾನು ಶ್ರೀನಿವಾಸ ಹಾವನೂರರ 'ಹೊಸಗನ್ನಡದ ಅರುಣೋದಯ' ಎಂಬ ಕೃತಿಗೆ ಋಣಿಯಾಗಿದ್ದೇನೆ.)[1]

## ಉತ್ತರ ಕನ್ನಡ ಮತ್ತು ಮುಂಬಯಿಯ ಸಂಬಂಧ

ಉತ್ತರ ಕನ್ನಡ ಜಿಲ್ಲೆ ಹಾಗೂ ಮುಂಬಯಿಯ ಬಂದರುಗಳ ನಡುವಣ ಸಂಪರ್ಕವು ಈಸ್ಟ್ ಇಂಡಿಯಾ ಕಂಪನಿಯ ಕಾಲದಿಂದಲೇ ಸಾಗಿಬಂದಿದ್ದಿತು . ಅನೇಕ ಜನ ಶೇಣ್ವಿಗಳು ಈ ಕಂಪನಿಯ ನೌಕರರಾಗಿದ್ದರು. ಉತ್ತರ ಕನ್ನಡ ಜಿಲ್ಲೆಯು ಮುಂಬಯಿ ಪ್ರಾಂತ್ಯದಲ್ಲಿ ಸೇರ್ಪಡೆಯಾದಂದಿನಿಂದ ಆ ಸಂಪರ್ಕವು ಇನ್ನಷ್ಟು ಹೆಚ್ಚಾಯಿತು. ಮುಂಬಯಿ ನಗರದಲ್ಲಿಯ ಕನ್ನಡ ಸಾಹಿತ್ಯ ಕಾರ್ಯವು ಉತ್ತರ ಕನ್ನಡ ಜಿಲ್ಲೆಯವರಿಂದಲೇ ಆರಂಭವಾಯಿತು. ಮುಂಬಯಿಯಲ್ಲಿನ ಆಗ ನೆಲೆಸಿದ್ದಿರಬಹುದಾದ ಹಲವು ಸಾವಿರ ಕನ್ನಡಿಗರಲ್ಲಿ ಉತ್ತರ ಕನ್ನಡ ಜಿಲ್ಲೆಯವರೇ ಹೆಚ್ಚಾಗಿದ್ದರು.

## ಸುಧಾರಣಾವಾದಿ ಚಟುವಟಿಕೆಗಳು

19 ನೇ ಶತಮಾನದ ಉತ್ತರಾರ್ಧ, ಸುಧಾರಣಾವಾದಿಗಳ ಕಾಲ. ಮರಾಠಿ ಪರಿಸರ ಸುಧಾರಣಾವಾದಿಗಳ ಗುಂಗಿನಿಂದ ತುಂಬಿತ್ತು . **ರಾಜರಾಮಮೋಹನರಾಯರು , ಮಹರ್ಷಿ ಕರ್ವೆ** ಮುಂತಾದವರಿಂದ ಪ್ರಭಾವಗೊಂಡ ಮುಂಬಯಿ, 'ಹೊಸ ಸಮಾಜ' ದ ನಿರ್ಮಾಣ ಪ್ರಕ್ರಿಯೆಯಲ್ಲಿ ತೊಡಗಿತ್ತು . 1857 ರಲ್ಲಿ ಮುಂಬಯಿಯಲ್ಲಿ

ವಿಶ್ವವಿದ್ಯಾಲಯ ಆರಂಭವಾಗಿ ಅದರಿಂದ ಹೊರಬಂದ ತರುಣರು ದೇಶದ ಭವಿಷ್ಯ ರೂಪಿಸುವ ಕೆಲಸದಲ್ಲಿ ತೊಡಗಿದ್ದರು.

ಆಧುನಿಕತೆ ಎಲ್ಲ ಮಗ್ಗುಲಗಳಲ್ಲೂ ಚಾಚಿಕೊಂಡ ಸಂದರ್ಭ ಇದು . ಮನುಷ್ಯ ಸಂಬಂಧಗಳನ್ನು ಹೊಸ ರೀತಿಯಲ್ಲಿ ಅರ್ಥೈಸಲು ಇದು ಒತ್ತಾಯಿಸುತ್ತಿತ್ತು . ಸ್ಥಗಿತಗೊಂಡಿದ್ದ ಸಾಂಪ್ರದಾಯಕ ಬದುಕಲ್ಲಿ ಆಧುನಿಕ ಶಿಕ್ಷಣ 'ಚಲನೆ' ಮೂಡಿಸಿತ್ತು . ಆಧುನಿಕ ಶಿಕ್ಷಣ ಪಡೆದ ಯುವಕರು ತಮ್ಮ ಸಮಾಜವನ್ನು ಹೊಸಗಣ್ಣಿನಿಂದ ನೋಡುವುದನ್ನು ಆರಂಭಿಸಿದರು. ಇಂಗ್ಲೀಷ್ ಶಿಕ್ಷಣದೊಂದಿಗೆ ಸಾರಸ್ವತರು ಅನೇಕ ಹೊಸ ಹೆಜ್ಜೆಗಳನ್ನು ಇಟ್ಟರು . ಹೆಣ್ಣು ಮಕ್ಕಳು ಶಾಲೆ, ಕಾಲೇಜುಗಳಿಗೆ ಹೋಗಲಾರಂಭಿಸಿದರು. ವಿಧವಾ ವಿವಾಹಗಳು ಆರಂಭಗೊಂಡವು. ವಿಧವೆಯರು ಸಕೇಶಿಯಾದರು . ಧರ್ಮಶಾಸ್ತ್ರ , ರೂಢಿ ಎಲ್ಲವೂ ಹಾಸು ಹೊಕ್ಕಾಗಿರುವ ಸಮಾಜದಲ್ಲಿ ಸಹಜವಾಗಿ ತಾಕಲಾಟ ಆರಂಭವಾಯಿತು.

ಸುಧಾರಣಾವಾದಿಗಳ ಸುಧಾರಣಾ ಕಾರ್ಯ ಆರಂಭಗೊಂಡಿದ್ದು ಹೆಣ್ಣಿನ ದುಸ್ಥಿತಿಯನ್ನು ಸರಿಪಡಿಸುವ ನಿಟ್ಟಿನಿಂದ ; ವಿಧವಾ ವಿವಾಹ , ಬಾಲ್ಯ ವಿವಾಹವನ್ನು ತಡೆಗಟ್ಟುವುದೇ ಮೊದಲಾದ ಚಟುವಟಿಕೆಗಳಿಂದ . 1856 ರಲ್ಲಿ ವಿದ್ಯಾಸಾಗರರ ಹೋರಾಟದ ಫಲದಿಂದ ಬ್ರಿಟೀಷ್ ಸರಕಾರ The Hindhu widows Remarriage Act ನ್ನು ಜಾರಿ ಮಾಡಿತು . ಕರ್ವೆಯವರು 'ವಿಧವಾ ವಿವಾಹ ಸಂಘ ' ವನ್ನು ಸ್ಥಾಪಿಸಿ ತಾವೇ ಸ್ವತಃ ವಿಧವೆಯನ್ನು ಮದುವೆಯಾದರು. ಮದ್ರಾಸದಲ್ಲಿಯ ಸಾರಸ್ವತ ಸಮುದಾಯದವರು ಕ್ರಿ.ಶ 1884 ರಲ್ಲಿ ಬಾಲ್ಯ ವಿವಾಹ , ವಿಧವಾ ವಿವಾಹಗಳ ಬಗ್ಗೆ ತಮ್ಮಲ್ಲಿ ಚರ್ಚಿಸಿ ಎರಡು ನಿರ್ಣಯಕ್ಕೆ ಬಂದರು. ಒಂದನೇಯದು ಹದಿನೈದು ವರ್ಷದ ಒಳಗಿನ ಗಂಡು ಹುಡುಗರಿಗೆ ಹಾಗೂ 10 ವರ್ಷದ ಒಳಗಿನ ಹುಡುಗಿಯರಿಗೆ ಮದುವೆ ಮಾಡಬಾರದು . ಎರಡನೆಯದು ಗರ್ಭದಾನವಾಗಿರದ ವಿಧವೆಯರು ಪುನರ್ವಿವಾಹ ಮಾಡಿಕೊಳ್ಳಬಹುದು. ಇದಕ್ಕೆ ಸಮಾಜದ ಸಮ್ಮತಿ ಪಡೆಯುವ ಉದ್ದೇಶದಿಂದ ಈ ಸೂಚನೆಗಳನ್ನು ಮುಂಬಯಿಯ 'ಕನ್ನಡ ಸುವಾರ್ತೆ' ಪತ್ರಿಕೆಗಳಲ್ಲಿ ಪ್ರಕಟಿಸಲಾಯಿತು . ಮತ್ತು ಬೇರೆ ಬೇರೆ ಊರುಗಳಲ್ಲಿಯ ತಮ್ಮ ಸಮಾಜದವರ ಅಭಿಪ್ರಾಯ ಸಂಗ್ರಹಿಸುವ ಸಲುವಾಗಿ ಕಳುಹಿಸಲಾಯಿತು.

ಉತ್ತರ ಕನ್ನಡದ ಭಟ್ಕಳ ತಾಲಾಕಿನಲ್ಲಿರುವ ಚಿತ್ರಾಪುರ ಮಠ, ಸಾರಸ್ವತ ಸಮುದಾಯದವರ ಧಾರ್ಮಿಕ ಕೇಂದ್ರ . ಈ ಮಠದ 'ಪಾಂಡುರಂಗಾಶ್ರಮ' ಸ್ವಾಮಿಗಳ ಒಪ್ಪಿಗೆಯಿಲ್ಲದಿದ್ದರೆ ಇತರರಿಗೆ ಇದು ಸಮಂಜಸವೆಂದು ಕಂಡರೂ ಈ ಸೂಚನೆಗಳನ್ನು ಅನುಷ್ಠಾನಕ್ಕೆ ತರುವಂತಿದ್ದಿಲ್ಲ. ಆದುದರಿಂದ ಮಂಜೇಶ್ವರದ ಶಿವರಾಯ ಎಂಬುವರು ಈ ಎರಡೂ ಸೂಚನೆಗಳನ್ನು 'ವಿವಾಹ ಕನ್ಯಾ ಸ್ವರೂಪ ನಿರೂಪಣಮ್' ಎಂಬ ಪುಸ್ತಕವನ್ನು ಶ್ರೀಗಳವರೆಗೆ ಕಳಿಸಿಕೊಟ್ಟರು. ಮಠದ ಶಿಷ್ಯರಲ್ಲಿ ಅಭಿಪ್ರಾಯಭೇದ ಉಂಟಾದಾಗ ಪಾಂಡುರಂಗಾಶ್ರಮ ಸ್ವಾಮಿಗಳು 'ವಿಧವಾದ್ವಾಹ

ಚಿಕುರ್ಷ ಮತಭುಜನ ' ವೆಂಬ ತಮ್ಮ ಪುಸ್ತಕದ ಮೂಲಕ (1889) ಶಿಷ್ಯರ ಸಂದೇಹಗಳಿಗೆ ಸೂಕ್ತವಾದ ಪರಿಹಾರವನ್ನು , ನೀತಿ ಶಾಸ್ತ್ರಧಾರವನ್ನು ಕೊಟ್ಟು ಸುಧಾರಣಾವಾದಿಗಳ ನಿಲುವನ್ನು ಎತ್ತಿ ಹಿಡಿದರು.

ಸುಧಾರಣಾವಾದಿ ನಿಲುವು ಸಾಹಿತ್ಯ ಕ್ಷೇತ್ರದಲ್ಲಿಯೂ ಕಾಣಿಸಿಕೊಂಡಿತು . ಹೊಸಗನ್ನಡದ ಗದ್ಯತಂತ್ರ ರೂಪುಗೊಳ್ಳುತ್ತಿದ್ದ ಈ ಕಾಲದ ಹಲವಾರು ಕಾದಂಬರಿ ಮತ್ತು ನಾಟಕಗಳಲ್ಲಿ ಸ್ತ್ರೀ ಕೇಂದ್ರಿತ ವಿಚಾರಧಾರೆಯುಳ್ಳ ಅದರಲ್ಲೂ ವಿಧವಾ ಸಮಸ್ಯೆಯನ್ನು ಕುರಿತ ನಿಲುವುಗಳು ಪ್ರಕಟಗೊಂಡವು. ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ ಅರ್ಥಾತ್ ಕನ್ಯಾ ವಿಕ್ರಯದ ಪರಿಣಾಮವು

'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ನಾಟಕದ ದ್ವಿತೀಯ ಮುದ್ರಣದಲ್ಲಿ ಅದರ ಪ್ರಕಾಶಕರಾದ ಲಿಂಗೇಶ ಶರ್ಮರವರು ಈ ನಾಟಕದ ಕರ್ತೃ 'ಸೂರಿ ವೆಂಕಟರಮಣಶಾಸ್ತ್ರಿ ಎಂದು ಉಲ್ಲೇಖಿಸಿದ್ದಾರೆ. ನಾಟಕ ಪ್ರತಿಯ ಮೇಲೆ ನಾಟಕ ರಚನೆ ಮಾಡಿದವರ ಹೆಸರು 'ಹವ್ಯಕ ಹಿತೇಚ್ಛು' ಎಂದು ಉಲ್ಲೇಖಿಸಲಾಗಿದೆ. 'ಹವ್ಯಕರ ಹಿತವನ್ನು ಬಯಸುವವರು' ಎಂಬ ಈ ಹೆಸರೇ ಸುಧಾರಣಾವಾದಿಯೊಬ್ಬನ ಆಶಯವನ್ನು ತೋರಿಸುತ್ತದೆ.

'ಇಗ್ಗಪ್ಪ ಹೆಗಡೆ'ಯ ಕರ್ತೃ ಸೂರಿ ವೆಂಕಟರಮಣಶಾಸ್ತ್ರಿ , ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಸಮೀಪದ 'ಕರ್ಕಿ' ಎಂಬ ಊರಿನವರು. ಸೂರಿ ವಿಘ್ನೇಶ್ವರ ಶಾಸ್ತ್ರಿ ಎಂಬ ವಿದ್ವಾಂಸರ ಹಿರಿಯ ಮಗ. ಮನೆತನದ ವೈದಿಕ ವೃತ್ತಿ , ಮಠದಲ್ಲಿ ಸಂಸ್ಕೃತ ವ್ಯಾಸಂಗ ಕನ್ನಡ ನಾಡಿನ ಅನೇಕ ಕಡೆಗಳಲ್ಲಿವ ಓಡಾಟ – ಇವೆಲ್ಲವನ್ನೂ ಅನುಭವಿಸಿ ಬೂದಿ ಮಹಾಬಲೇಶ್ವರ ಭಟ್ಟ ಎಂಬ ಇನ್ನೊಬ್ಬ ವೈದಿಕರೊಡನೆ ವೆಂಕಟರಮಣಶಾಸ್ತ್ರಿ ಮುಂಬಯಿಗೆ ಹೋದರು. ಅಲ್ಲಿ ಭಾರತಿ ಛಾಪಖಾನೆ ಎಂಬ ಮುದ್ರಣಾಲಯ ಸ್ಥಾಪಿಸಿ ಅನೇಕ ಹಳೆಯ ಗ್ರಂಥಗಳನ್ನು ಯಕ್ಷಗಾನ ಪ್ರಸಂಗಗಳನ್ನು ಪ್ರಕಟಿಸಿದ್ದರು. ಸುಮಾರು 28 ಕೃತಿಗಳನ್ನು ಅವರು ಪ್ರಕಟಿಸಿದ್ದಾರೆಂದು ತಿಳಿದು ಬಂದಿದೆ. ಈ ಪ್ರಕಟಣೆಗಳಲ್ಲಿ ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನದ ವಸ್ತುವನ್ನೇ ಆಧರಿಸಿದ , ಶಿವರಾಮ ಧಾರೇಶ್ವರರ ಕನ್ಯಾವಿಕ್ರಯ ಎಂಬ ಕೃತಿಯೂ ಒಂದು. ಇವರು ಪ್ರಾಚೀನ ನಾಟ್ಯ ಕಥಾವರ್ಣ , ಯಕ್ಷಗಾನ – ಮುಂತಾದ ಕೃತಿಗಳನ್ನು ಪ್ರಕಟಿಸಿದ್ದರು.

ಉತ್ತರ ಕನ್ನಡ ಜಿಲ್ಲೆಯ ಕಿಬ್ಬಚ್ಚಲ ಮಂಜಮ್ಮ ಎಂಬ ಮಹಿಳೆಯ 'ವೇದ ತತ್ವ ಶಾಸ್ತ್ರ' ಎಂಬ ಕೃತಿಯನ್ನು 1886 ರಲ್ಲಿ ಶಾಸ್ತ್ರಿಗಳು ತಮ್ಮ 'ಭಾರತಿ ಛಾಪಖಾನೆಯಲ್ಲಿ' ಪ್ರಕಟಿಸಿದರು.[4] 'ಕಳೆದ ಶತಮಾನದಲ್ಲಿ ಮೊತ್ತ ಮೊದಲು ಮುದ್ರಣಗೊಂಡ ಮಹಿಳಾ ಸಾಹಿತ್ಯವಿದು.' ಶಾಸ್ತ್ರಿಗಳು ಹವ್ಯಕ ಸುಬೋಧ ಮತ್ತು ಹಿತೋಪದೇಶ ಎಂಬ ಪತ್ರಿಕೆಗಳನ್ನು ನಡೆಸುತ್ತಿದ್ದರು. ಮಕ್ಕಳ ಮಾನಸಿಕ ವಿಕಾಸವನ್ನು ಉದ್ದೇಶವಾಗಿರಿಸಿಕೊಂಡ 'ಹಿತೋಪದೇಶ' ದಲ್ಲಿ ಚರಿತ್ರೆ , ವಿಜ್ಞಾನದ ಲೇಖನಗಳ ಜತೆ ವ್ಯಂಗ ಚಿತ್ರಗಳನ್ನು ಪ್ರಕಟಿಸುತ್ತಿದ್ದರು. "ಕನ್ನಡದಲ್ಲಿ ವ್ಯಂಗ ಚಿತ್ರಗಳನ್ನು ಮೊತ್ತಮೊದಲಿಗೆ ವೆಂಕಟರಮಣಶಾಸ್ತ್ರಿಯೇ ಬಳಸುತ್ತಿದ್ದಾನೆಂದು ತೋರುತ್ತದೆ" ಎಂದು ಹಾವನೂರ್ ಹೇಳಿದ್ದಾರೆ.[2]

ಶಾಸ್ತ್ರಿಗಳು ನಡೆಸುತ್ತಿದ್ದ 'ಹವ್ಯಕ ಸುಬೋಧ' ಎಂಬ ಪತ್ರಿಕೆ ತುಂಬಾ ಕ್ರಾಂತಿಕರವಾಗಿತ್ತು ಎಂದು ತಿಳಿದುಬರುತ್ತದೆ. ಆ ಕಾಲದಲ್ಲಿ ನಡೆದ ಅರಣ್ಯ ಇಲಾಖೆಯ ಅವ್ಯವಹಾರ , ಬ್ರಿಟೀಷರ ಕುಟಿಲ ನೀತಿ ಇವೆಲ್ಲವನ್ನು ಅವರ ಪತ್ರಿಕೆ ಬಯಲಿಗೆಳೆದಿತ್ತು. ಈ ಕಾರಣದಿಂದಾಗಿ ಬ್ರಿಟೀಷ್ ಸರಕಾರ ಶಾಸ್ತ್ರಿಗಳಿಗೆ ಶಿಕ್ಷೆಯನ್ನೂ ವಿಧಿಸಿತ್ತು. ಕ್ರಾಂತಿಕಾರಿ ಮನೋಭಾವ, ಅಸಾಧಾರಣ ಪ್ರತಿಭೆ, ಹಲವಾರು ಕ್ಷೇತ್ರಗಳ ಅನುಭವ, ಸ್ತ್ರೀಯರಕುರಿತಾದ ಮಾನವೀಯ ಕಾಳಜಿ ಇವೆಲ್ಲವುಗಳೊಂದಿಗೆ ಆ ಕಾಲದಲ್ಲಿ ಮಹಾರಾಷ್ಟ್ರದ ಪರಿಸರದಲ್ಲಿ ಪ್ರದರ್ಶಿತಗೊಳ್ಳುತ್ತಿದ್ದ ಐರೋಪ್ಯ ಸಾಮಾಜಿಕ ವಾಸ್ತವವಾದಿನಾಟಕಗಳ ಮಾದರಿಗಳನ್ನಿಟ್ಟುಕೊಂಡು[3] ವೆಂಕಟರಮಣಶಾಸ್ತ್ರಿ ಇಗ್ಗಪ್ಪಹೆಗಡೆವಿವಾಹ ಪ್ರಹಸನವನ್ನು ರಚಿಸಿರಬಹುದೆಂದು ಅನಿಸುತ್ತದೆ.

**ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ** ಅಥವಾ 'ಕನ್ಯಾ ವಿಕ್ರಯದ ಪರಿಣಾಮವು' ಎಂಬ ನಾಟಕ 'ವಿವಾಹ' ದಂತಹ ಸಂಬಂಧವೊಂದು ಪ್ರಹಸನವಾದ ಬಗೆಯನ್ನು ತಿಳಿಸುವಂತದ್ದಾಗಿದೆ. ಉತ್ತರ ಕನ್ನಡದ ಘಟ್ಟದ ಕೆಳಗೆ ವಾಸ ಮಾಡುವ ಹವ್ಯಕ ಸಮಾಜದಲ್ಲಿ ಚಿಕ್ಕ ವಯಸ್ಸಿಗೇ ಮದುವೆ ಮಾಡುವ ಪದ್ಧತಿಯ ಜತೆ, ಹುಡುಗಿಯ ತಂದೆಗೆ ವಿವಾಹ ಶುಲ್ಕವನ್ನು ಕೊಡುವ ಪದ್ಧತಿಯೂ ರೂಢಿಯಲ್ಲಿತ್ತು . ಹೆಚ್ಚು ಹೆಚ್ಚು ಕನ್ಯಾ ಶುಲ್ಕ ಪಡೆಯುವ ಆಸೆಗೆ ಬೀಳುವ ಅಪ್ಪಂದಿರು ಮಗಳನ್ನು ಮದುವೆಯಾಗುವ 'ವರ ' ಯೋಗ್ಯನೋ , ಅಯೋಗ್ಯನೋ ಎಂಬುದನ್ನು ಲಕ್ಷಿಸುತ್ತಿರಲಿಲ್ಲ. ಈ ಅನಿಷ್ಠ ಪರಂಪರೆಯ ವಿರುದ್ಧ ಶಾಸ್ತ್ರಿಗಳು ತಮ್ಮ ನಾಟಕದಲ್ಲಿ ದನಿ ಎತ್ತಿದರು. ಈ ನಾಟಕದಲ್ಲಿ 70 ವರ್ಷ ಸಮೀಪಿಸಿದ ರೋಗಿಷ್ಠ ಇಗ್ಗಪ್ಪ ಹೆಗಡೆ ಮೂರನೆಯ ಮದುವೆಗಾಗಿ ಸಾವಿತ್ರಿ ಎಂಬ ಹುಡುಗಿಯನ್ನು ವರಿಸುತ್ತಾನೆ. ಹಾಗಾಗಿ ಇದು ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ.

ಈ ಮದುವೆಗಾಗಿ ಇಗ್ಗಪ್ಪ ಹೆಗಡೆ , ತಾನು ಮದುವೆಯಾದ ಸಾವಿತ್ರಿಯ ತಂದೆ ಶಿವಭಟ್ಟನಿಗೆ 2000 ರೂ ಕನ್ಯಾ ಶುಲ್ಕ ನೀಡುತ್ತಾನೆ. ಇಗ್ಗಪ್ಪ ಹೆಗಡೆ ನೀಡಿದ ಹಣಕ್ಕಾಗಿ ಶಿವಭಟ್ಟ ಮಗಳನ್ನು ಮಾರಿಕೊಳ್ಳುತ್ತಾನೆ. ಆದ್ದರಿಂದಲೇ ಈ ನಾಟಕದ ಇನ್ನೊಂದು ಹೆಸರು 'ಕನ್ಯಾ ವಿಕ್ರಯ' ಅರ್ಥಾತ್ ಹೆಣ್ಣಿನ ಮಾರಾಟ.

ಇಗ್ಗಪ್ಪ ಹೆಗಡೆ, ಮದುವೆಯಾದ ಕೆಲದಿನಗಳಲ್ಲೇ ಮರಣ ಹೊಂದುತ್ತಾನೆ. ಸಮಯಸಾಧಕನಾದ ಆತನ ಭಾವ ವಾಸ ಹೆಗಡೆಯಿಂದಾಗಿ ಸಾವಿತ್ರಿ ಗರ್ಭ ಧರಿಸುತ್ತಾಳೆ. ಅನೀತಿಯ ಶಿಶುವಿಗೆ ಜನ್ಮ ನೀಡುತ್ತಾಳೆ . ಸಮಾಜದ ಅಪವಾದಕ್ಕೆ ಹೆದರಿ ಆ ಶಿಶುವನ್ನು ಹೂತು ಹಾಕಿದ ತಪ್ಪಿಗಾಗಿ ನ್ಯಾಯಾಲಯ ಸಾವಿತ್ರಿ , ವಾಸ ಹೆಗಡೆ ಹಾಗೂ ಈ ಪ್ರಕರಣಕ್ಕೆ ಸಂಬಂಭಪಟ್ಟವರಿಗೆ ಶಿಕ್ಷೆ ವಿಧಿಸುತ್ತದೆ.

ಉತ್ತರ ಕನ್ನಡ, ಘಟ್ಟದ ಮೇಲೆ ಮತ್ತು ಘಟ್ಟದ ಕೆಳಗೆ ಎಂಬ ಭೌಗೋಲಿಕ ವಿಭಾಗ ಹೊಂದಿದ್ದು ಇಗ್ಗಪ್ಪ ಹೆಗಡೆ ಘಟ್ಟದ ಮೇಲಿನವನು. ಸಾಧಾರಣವಾಗಿ ಘಟ್ಟದ ಮೇಲಿನವರು ಸಿರಿವಂತರು ಹಾಗೂ ಘಟ್ಟದ

ಕೆಳಗಿನವರು ಆರ್ಥಿಕವಾಗಿ ಅಷ್ಟು ಸ್ಥಿತಿವಂತರಲ್ಲ. ಹಾಗಾಗಿ ಇಗ್ಗಪ್ಪ ಹೆಗಡೆಯವರಿಗೆ ಹಣ ಕೊಟ್ಟರೆ ಹೆಣ್ಣು ಸಿಗುವುದು ಘಟ್ಟದ ಕೆಳಗಿನ ಪ್ರದೇಶದಲ್ಲಿ.

ನಾಟಕದ ಪಾತ್ರಗಳು, ಅವು ಪ್ರತಿನಿಧಿಸುವ ಭೌಗೋಳಿಕ ಪರಿಸರದಲ್ಲಿ ಬಳಕೆಯಲ್ಲಿರುವ ಆಡು ನುಡಿಯನ್ನೇ ನುಡಿಯುತ್ತವೆ. ಹವ್ಯಕರಲ್ಲೇ ಘಟ್ಟದ ಮೇಲಿನ ಹಾಗೂ ಘಟ್ಟದ ಕೆಳಗಿನ ಜನರಾಡುವ ಭಾಷೆಯಲ್ಲಿ ವ್ಯತ್ಯಾಸವಿದೆ . ಕೃತಿಕಾರ ಈ ಸೂಕ್ಷ್ಮಗಳನ್ನು ಅನುಸರಿಸಿದ್ದಾನೆ . ಘಟ್ಟದ ಮೇಲಿನ ಆಡು ಮಾತಿಗೆ ಉದಾಹರಣೆಯಾಗಿ, ಇಗ್ಗಪ್ಪ ಹೆಗಡೆಯ ಈ ಮಾತನ್ನು ನೋಡಬಹುದು.

**ಇಗ್ಗಪ್ಪ ಹೆಗಡೆ** : – ತಪ್ಪಾಗೆಲ್ಲಾ 16 ವರಾಕ್ಕೆ ಮಾತಮಾಡಿಕೊಂಡು ಯಮ್ಮೆ ತಂದಿದ್ದೀ. ತಂದ ಮೇಲೆ ತುಸು ಚಾಳಿ ಮಾಡ್ತು, ಆದ್ರೂ ಕಡೆಗೆ ಯಮ್ಮನೆ ಹೆಗ್ಗಡ್ತಿ ಜೀವಂತಿಪ್ಪನಕಾ , ಸುರಕ್ಷಿತ ಕೊಡ್ತು ಘಟ್ಟದ ಕೆಳಗಿನ ಹವ್ಯಕರ ಆಡುಮಾತಿಗಾಗಿ ಈ ಉದಾಹರಣೆ ನೋಡಬಹುದು.

**ಗಣೇಶ ಭಟ್ಟ** – ಕಾವೇರಿ , ಈಗ ನೀ ಗುಣು ಗುಟ್ಟಡಾ ನೊಡ್ವೋ ಅಂವ ಭಾರೀ ಸಾವಕಾರ ಹೆಗಡೆ. ಆ° ಇಪ್ಪಮನೇ ಹೆಗಡೆಯೇ ಸರಿ , ಅವನ ಕಂಡ್ರೆ ಯಾಕೋ ತುಸು..

"ಈಗ ನೀವಂದ ಪ್ರಸ್ಥಾಪಿಗೂ ಹೋಪದು ಬ್ಯಾಡ, ಹ್ಯಾಗೆ ಮಾಡದವ್ರೋ, ಹಾಗೆ ಬಿಟ್ಟವ್ರೊ, ಯಾರಿಗೂ ತೇಳೀಬಾರಾ. ಆ° ಆತೂ ನೀ ಆತು , ಹೆಗಡೆ ಆಸ್ತಿ ಬಹಾಳ ಚಲೋದಿದ್ದು ಅಂವಗೇನೂ ಹಿಂದಿಲ್ಲೇ ಮುಂದಿಲ್ಲೇ , ತುಸಾ ವರ್ಷಾ ಜಾಽ ಅನ್ನೋದೊಂದೇ ಸರಿ, ಒಂದು ವೇಳೆ ಮುಂದೆ ಆಗಾನಿ ಆದ್ರೂ ನಿಮ್ಮನೆ ಕೂಸೀಗೆ ಕಾಲಮೇಲೆ ಕಾಲ ಹಾಯ್‌ಕೊಂಡು ತಿಂದ್ರೂ ಯಥೇಚ್ಛ ಇದ್ದು"

ಕೊಂಕಣಿ ಭಾಷೆ ಮಾತಾಡುವ ವ್ಯಾಪಾರಿ ಮನೆತನದ 'ರಾಯ' ರು ನಾಟಕದಲ್ಲಿ ತಮ್ಮ ಜಾತಿಯವನ ಹತ್ತಿರ ಕೊಂಕಣಿಯಲ್ಲೇ ಮಾತನಾಡುತ್ತಾರೆ.

**ರಾಯ** :– ಕಿತವ್ಹೋ? ಮಂಜೈಶೇಣಿ ! ದಸ್ತೈ ವ್ರೋಜಾರಿ ಕಾಂಯ್ ಶಬ್ದವಂನಕ ಯತ್ತನಾ , ಥೈಂ ಯಥಾಯೋಗ್ಯ ಬೊರೈ ಲಾ...

ರಂಗಪ್ರಯೋಗ ದೃಷ್ಟಿಯಿಂದ ಆಸಕ್ತಿ ಹುಟ್ಟಿಸುವ ಹಲವಾರು ಪಾತ್ರಗಳು ಈ ನಾಟಕದಲ್ಲಿವೆ. ಮದುವೆ ದಲ್ಲಾಳಿ ಕಂತ್ರಿ ಗಣೇಶ ಭಟ್ಟ , ಸಾವಿತ್ರಿಯ ಅಸಹಾಯಕ ತಾಯಿ ಕಾವೇರಿ, ದಸ್ತವೇಜು ಬರೆವ ಆದರ್ಶ ವ್ಯಕ್ತಿತ್ವದ ನಾಡಿಗರು ಲೇವಾದೇವಿಯ ರಾಯರು, ಊರಪಾಪವನ್ನೆಲ್ಲಾ ಅಗಿದು ಬಾಯಿ ತುರಿಕೆ ತೀರಿಸಿಕೊಳ್ಳುವ ಮುದುಕಿ ಗಣ್ಣಮ್ಮಾ , ಕಾಶಪ್ಪ ಹೆಗಡೆ, ದೇವಸ್ಥಾನದ ಭಟ್ಟರು, ಪರಿಸ್ಥಿತಿಯ ವಿಶ್ಲೇಷಣೆಯ ಜತೆ ಸಮತೂಕದ ನಿರ್ಣಯ ನೀಡುವ ನ್ಯಾಯಾಧೀಶರು ಇತ್ಯಾದಿ. ಸಂದರ್ಭದ ಅಗತ್ಯತೆಗಳನ್ನು ಪೂರೈಸುವ ಈ ಪಾತ್ರಗಳು ರಂಗಪ್ರಯೋಗವನ್ನು ಲವಲವಿಕೆಯಿಂದ ಇಡಲು ನೆರವಾಗುತ್ತದೆ.

ನಾಟಕದ 'ಬಂಧ ' ತುಂಬ ಬಿಗಿಯಾಗಿದೆ . 11 ದೃಶ್ಯಗಳಿದ್ದರೂ , ಯಾವ ದೃಶ್ಯವೂ ಎಳೆಯಲ್ಪಡದೇ ವೇಗವಾಗಿ ಸಾಗುತ್ತದೆ. ಚಿಕ್ಕ ಚಿಕ್ಕ ದೃಶ್ಯಗಳು , ವೇಗವಾದ ಕಥನ ತಂತ್ರ ನಾಟಕದ 'Tempo' ವನ್ನು ಕಾಪಾಡಲು ಅನುಕೂಲ ಒದಗಿಸಿದೆ. ಆದ್ಯ ರಂಗಾಚಾರ್ಯರು ಹೇಳುವ ಹಾಗೆ "ಬರೀ ಸಮಾಜ ಸುಧಾರಣೆಯ ದೃಷ್ಟಿಯಿಂದ ಬರೆದ ಸಂಭಾಷಣೆ ಇದು ಎನ್ನುವಂತಿಲ್ಲ . ಇಲ್ಲಿ ಕಲೆಗಾರಿಕೆಯ ನಾಟಕೀಯತೆ ಇದೆ."[4]

ಈ ನಾಟಕದಲ್ಲಿ ಕ್ರಿಯೆಗಳು ಸೂಚಿಸಲ್ಪಟ್ಟಿಲ್ಲ , ಪಾತ್ರಗಳ ಚಲನೆ ಮಿತವಾಗಿದೆ, ಆದರೆ ಸಂಭಾಷಣೆ ಎಷ್ಟು ಶಕ್ತಿಯುತವಾಗಿದೆಯೆಂದರೆ ವಾಚಕಾಭಿನಯವೊಂದರಿಂದಲೇ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗಬಹುದಾಗಿದೆ.

ತಮ್ಮ ಮಾತಿನಲ್ಲಿ ಹವ್ಯಕರ ಸ್ವಭಾವದ, ಅವರ ಬದುಕಿನ ವಿಶ್ಲೇಷಣೆ ಮಾಡುವ 'ನಾಡಿಗ 'ರ ಪಾತ್ರ ಚಿತ್ರಣ ನಹ ನಾಟಕಕ್ಕೆ ತೇಪೆ ಹಚ್ಚಿದಂತೆ ಬಂದ ಸುಧಾರಣಾವಾದಿ ಆಶಯ ನಿರ್ವಹಣೆಯ ಪಾತ್ರವಾಗದೇ, ಕ್ರಿಯೆಯ ಒಳಗಿನಿಂದಲೇ ಹುಟ್ಟಿ ಬಂದ ಪಾತ್ರವಾಗಿ ಚಿತ್ರಿತವಾಗಿರುವುದು ಶಾಸ್ತ್ರಿಗಳ ಕಲೆಗಾರಿಕೆಯ ಕಸುಬಿಗೊಂದು ನಿದರ್ಶನ . ನಾಡಿಗರ ತೀಕ್ಷ್ಣ ಮಾತುಗಳು ಹವ್ಯಕ ಸಮಾಜಕ್ಕೆ ಕೆಂಡ ಮುಟ್ಟಿದ ಅನುಭವ ತಂದಿರಬೇಕು . ಅವರಾಡುವ ಕೆಲ ಮಾತುಗಳು ಹೀಗಿವೆ

"ಈ ಜಾತಿ ಜನರು ಸಾಲದ ಬಡ್ಡಿ , ಹೆಣ್ಣಿನ ತಿರಾ, ಲಂಚರುಷವತ್ತು ಇವು ಮೂರರಿಂದ ಅಗದೀ ಕೆಟ್ಟು ನಿಃಸಾರವಾಗುತ್ತಾ ಬಂದರೂ , ಇಂಥ – ದೂರದೃಷ್ಟಿಯನಕಾ ಈ ಜನರ ಸಂಪರ್ಕದಲ್ಲಿ ಸಹಾ ಇಲ್ವಾ ! ಹಾಂ ! ಹೆಗಡೇರ ಬರಬೇಕೂ !ಯಂತವಂದು ತುಸೂ ಏರಿಸಿ ಮಾತ್ನಾಡಿಸಿದರೆ ತೀರಿತು ಹೆಗಡೇರ ಮುಕ್ಕಳಿ ಅಟ್ಟಕ್ಕೇರಿತೆ ! ಹವ್ಯಕರು ಅಂದರೆ ಭೋಳೇರು ! ಅವರ ಫಲದ ಶ್ರಮದಿಂದ ಪೇಟೆಯಲ್ಲಿರು ನಾವೆಲ್ಲರೂ ಸುಖಜೀವಿಗಳಾಗಿದ್ದೇವೆ !"

ಮಠದ ಪಾರುಪತ್ತೆಗಾರರಾಗಿಯೂ ಕಾರ್ಯನಿರ್ವಹಿಸಿದ್ದ ವೆಂಕಟರಮಣಶಾಸ್ತ್ರಿಗಳು ಮಠದ ಒಳಗಿನ ಗೆದ್ದಲುಗಳ ಪರಿಚಯವನ್ನು ಚೆನ್ನಾಗಿ ಬಲ್ಲವರು. ಸಂಪ್ರದಾಯದ ಮುಷ್ಠಿಯೊಳಗಿದ್ದ ಆ ಕಾಲದಲ್ಲಿಯೇ ನ್ಯಾಯಾಧೀಶರ ಪಾತ್ರದ ಮೂಲಕ ಶಾಸ್ತ್ರಿಗಳು ಹೇಳಿಸುವ ಮಾತುಗಳು ಹೀಗಿವೆ "ಇಂಥ ಧರ್ಮ ಸಂಬಂಧವಾದ ದುರಾಚಾರಗಳನ್ನು ಪ್ರತಿಬಂಧಿಸುವುದಕ್ಕೆ ಆಯಾಯ ಜಾತಿಯ ಮಠಾಧಿಪತಿಗಳು ಸಮರ್ಥರಿರುತ್ತಾರೆ. ಆ ಧರ್ಮ ಗುರುಗಳು ಇಂಥ ದುರಾಚಾರ ನಡೆಯುವುದನ್ನು ನೋಡಿಕೊಂಡು ಸುಮ್ಮನಾಗಿರುವುದು ಬಹಳ ಶೋಚನೀಯವಾದ ಸಂಗತಿಯಾಗಿರುತ್ತದೆ. ಇಂಥ ಪ್ರಕರಣದಲ್ಲಿ ಮಠಾಧಿಪತಿಗಳಿಂದಾಗಲಿ ಅಥವಾ ಊರಿನ ಮೋಕ್ತೇಸರ ಈತನಿಂದಾಗಲೀ ಇಂಥ ವಿಧವಾ ಗರ್ಭ ಪ್ರಕರಣವು ತಮಗೊಂದು ಸಂಪಾದನೆ ರೂಪವಾದ ಬೆಳೆಯೆಂದು ಎಣಿಸಲ್ಪಡುವಂತೆ ವ್ಯಕ್ತವಾಗುತ್ತದೆ."

ನಾಟಕದಲ್ಲಿ ಹಲವಾರು ಸಂಘರ್ಷಗಳಿವೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು.

**ಭೌಗೋಳಿಕ ಸಂಘರ್ಷ**

ಘಟ್ಟದ ಮೇಲೆ × ಘಟ್ಟದ ಕೆಳಗೆ,

**ಆರ್ಥಿಕ ಸಂಘರ್ಷ**

ಉಳ್ಳವರು × ಇಲ್ಲದವರು,

**ಮೌಲ್ಯದ ಸಂಘರ್ಷ**

ನಾಡಿಗರು×ರಾಯರು

**ಸನಾತನ ಮತ್ತು ಆಧುನಿಕತೆಯ ನಡುವಿನ ಸಂಘರ್ಷ**

ದೇವಸ್ಥಾನ×ಕೋರ್ಟ್

ಈ ಸಂಘರ್ಷಗಳು ನಾಟಕೀಯತೆಯ ಪರಿಣಾಮವನ್ನು ಗಾಢವಾಗಿಸುತ್ತವೆ.

ಮನುಷ್ಯನನ್ನು ತಿದ್ದಬೇಕಾದ **ಸನಾತನ ದೇವಾಲಯಗಳಾದ** ಮಠಗಳು , ಮಂದಿರಗಳು ಬಂದಳಿಕೆಗಳಾಗಿ ಜನರ ಪಾಪಗಳನ್ನೇ ಉಪಜೀವನಕ್ಕಾಗಿ ಇರಿಸಿಕೊಳ್ಳಲಾರಂಭಿಸಿದ ಸಂದರ್ಭದಲ್ಲೇ **ಆಧುನಿಕ ದೇವಾಲಯಗಳಾದ** ನ್ಯಾಯಾಲಯಗಳು ಸಾವಿತ್ರಿಯಂತವರ ಮೇಲೆ ಕರುಣೆ ತೋರುತ್ತದೆ.

ಸರಳ ರಂಗಸಜ್ಜಿಕೆ , ಪರಿಣಾಮಕಾರಿ ಮಾತುಗಳನ್ನೊಳಗೊಂಡ ಈ ನಾಟಕ ಅದು ರಚನೆಗೊಂಡ ಕಾಲದಲ್ಲಿ ಪ್ರದರ್ಶನವಾದ ಬಗ್ಗೆ ಮಾಹಿತಿಗಳು ಲಭ್ಯವಿಲ್ಲ. ಮುಂದೆ ಕೆಲವು ರಂಗಾಸಕ್ತರು ಈ ಕುರಿತು ಆಸಕ್ತಿವಹಿಸಿದರು. 1966 ರಲ್ಲಿ ಪ್ರೊ.ಎಲ್.ಟಿ.ಶರ್ಮ ಕಾಲೇಜಿನ ಕೆಲವು ಪ್ರಾಧ್ಯಾಪಕರುಗಳನ್ನು ಸೇರಿಸಿ ಧಾರವಾಡ ಆಕಾಶವಾಣಿಗಾಗಿ ಈ ನಾಟಕವನ್ನು ಸಿದ್ಧಪಡಿಸಿದರು. 1982 ರಲ್ಲಿ ಮೈಸೂರಿನ ಹವೀಕ ಸಂಘದವರು ಇದನ್ನು ರಂಗದ ಮೇಲೆ ತಂದರು .1987 ರಲ್ಲಿ ಶಿರಸಿಯ ಸಮೀಪದ ಬಾಳೆಗದ್ದೆ ಊರಿನ ಯುವಕ ಯುವತಿಯರು ಕಿರಣ್ ಭಟ್ ನಿರ್ದೇಶನದಲ್ಲಿ ಈ ನಾಟಕವನ್ನು ಪ್ರಯೋಗಿಸಿದರು. ಉತ್ತರ ಕನ್ನಡದಲ್ಲಿ ಈ ನಾಟಕ ಪೂರ್ಣ ಪ್ರಮಾಣದಲ್ಲಿ ರಂಗಪ್ರಯೋಗಗೊಂಡ ಮೊದಲ ಉದಾಹರಣೆ ಇದು. ಮುಂಬೈನ ಹವ್ಯಕ ಸಂಘ ಇದರ 'ಓದಾಣ' ಕಾರ್ಯಕ್ರಮವನ್ನು 1988 ರಲ್ಲಿ ನಡೆಸಿತು.

**ಶಿವರಾಮ ಧಾರೇಶ್ವರರ 'ಕನ್ಯಾವಿಕ್ರಯ'** ನಾಟಕ ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ ಪ್ರಕಟವಾದ 17 ದಿನಗಳಲ್ಲಿ ಪ್ರಕಟವಾಗಿದೆ. (ಇಗ್ಗಪ್ಪ ಹೆಗಡೆ : 31-3-1987 ಕನ್ಯಾವಿಕ್ರಯ : 17-4-87) ಶಿವರಾಮ ಧಾರೇಶ್ವರ ಸಹ ಮುಂಬಯಿಯಲ್ಲಿ ನೆಲೆಸಿದವರು. ಸೂರಿ ವೆಂಕಟರಮಣಶಾಸ್ತ್ರಿ ಹಾಗೂ ಇವರು ಪರಸ್ಪರ ಸ್ನೇಹಿತರು. ಸಮಾನ ಕಥಾವಸ್ತುವನ್ನು ಒಂದೇ ಸಮಯಕ್ಕೆ ಇವರಿಬ್ಬರೂ ಕೈಗೆತ್ತಿಕೊಂಡಿದ್ದಾರೆ. ಆದರೆ ಅದರ ನಿರ್ವಹಣಾ ಕ್ರಮ ಇಬ್ಬರಲ್ಲೂ ಬೇರೆಯೇ ಮತ್ತು ಸೂರಿ ವೆಂಕಟರಮಣಶಾಸ್ತ್ರಿಗಳೇ ಕನ್ಯಾ ವಿಕ್ರಯ ನಾಟಕವನ್ನು ಅಚ್ಚು ಹಾಕಿದರು.

ನಾಟಕದ ಕಥಾ ಹಂದರ ಹೀಗಿದೆ ಶಂಭಟ್ಟ ತನ್ನ 9 ವರ್ಷದ ಮಗಳನ್ನು ಕನ್ಯಾಶುಲ್ಕ ಸ್ವೀಕರಿಸಿ ನಾರಾಯಣ ಭಟ್ಟನ ದುರಾಚಾರಿ ಮಗ ವಿಶ್ವಂಭರನಿಗೆ ಮದುವೆಮಾಡಿ ಕೊಡುತ್ತಾನೆ. ವಿಶ್ವಂಬರ ಹರಯದಲ್ಲೇ ಸತ್ತು ಶಂಭಟ್ಟನ ಮಗಳು ಬಾಲವಿಧವೆಯಾಗುತ್ತಾಳೆ . ವಿಧವೆಯಾದ ಶಂಭಟ್ಟನ ಮಗಳು ಪ್ರಕೃತಿ ಸಹಜ ಆಸೆಯಿಂದ ಗರ್ಭವತಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆಕೆಯ ತಾಯಿಯೂ ಆತ್ಮಹತ್ಯೆ ಮಾಡಿಕೊಂಡರೆ ಶಂಭಟ್ಟನಲ್ಲಿಯ ಹಣ ಕಳುವಾಗಿ ಹೋಗಿ ಅತನೂ ದೇಶಾಂತರ ನಡೆಯುತ್ತಾನೆ. ಕನ್ಯಾವಿಕ್ರಯಕ್ಕೆ ಬಲಿಯಾದ ಕುಟುಂಬವೊಂದರ ದುರಂತ ಚಿತ್ರಣ ಇದು.

ಕನ್ಯಾಶುಲ್ಕವನ್ನು ಕೊಡಲೊಪ್ಪದ ಸುಧಾರಣಾವಾದಿಯೊಬ್ಬನ (ರಾಮಭಟ್ಟ) ಪಾತ್ರವನ್ನು ಕೃತಿಕಾರ ಚಿತ್ರಿಸಿದ್ದಾನೆ. ಶಂಭಟ್ಟ ತನ್ನ ಮಗಳ ಮದುವೆಗೆ ಸಂಬಂಧಿಸಿ ಈ ರಾಮಭಟ್ಟನಲ್ಲಿ ಮಾತುಕತೆ ನಡೆಸುತ್ತಾನೆ ಆ ಸಂದರ್ಭದ ಚರ್ಚೆ ಸ್ವಾರಸ್ಯಕರವಾಗಿದೆ.

**ಶಂಭಟ್ಟ** : "ನಮಗೆ ಸಾಯುವ ಪರಿಯಂತವೂ ಸುರಕ್ಷತೆಯಿಂದ ಆಶನ, ವಸನ ಶಿಕ್ಕುವಂತೆ ನಡೆಸಿಕೊಟ್ಟರೆ ತೀರಿತು. ಹೆಚ್ಚೇನು ಬೇಡ"

**ರಾಮಭಟ್ಟ** : "ಬಹಳ ಒಳ್ಳೆಯದಾಯಿತು , ನೀವೆಲ್ಲರೂ ನಮ್ಮ ಮನೆಯಲ್ಲೇ ಬಂದು ಇದ್ದು ಬಿಡಿರಿ!"

'ಕನ್ಯಾವಿಕ್ರಯ' ಎಂಬ ಶೀರ್ಷಿಕೆಯೇ 'ಕನ್ಯಾಶುಲ್ಕ'ದ ತೀವ್ರ ವಿಡಂಬನೆಯಾಗಿದೆ. ಯೋಗ್ಯ ವರನನ್ನು ನೋಡದೇ ಹಣಕ್ಕಾಗಿ ಬಾಲ್ಯವಿವಾಹ ಮಾಡುವ ಪದ್ಧತಿ ವಿರುದ್ಧ ನಾಟಕ ಮಾತನಾಡುತ್ತದೆ.

ಹವ್ಯಕರ ಆಡುಮಾತುಗಳಲ್ಲೇ ನಾಟಕ ನಿರೂಪಿತವಾಗಿದ್ದರೂ ಓದುವಿಕೆಗೆ ಅನುಕೂಲವಾಗುವಂತೆ ಮಾರ್ಪಾಡು ಮಾಡಿಕೊಂಡು ಆಡುಮಾತನ್ನು ಗ್ರಾಂಥಿಕರೂಪದಲ್ಲಿ ಇಡಲಾಗಿದೆ. ಈ ನಾಟಕ 'ಇಗ್ಗಪ್ಪ ಹೆಗಡೆ' ಯಷ್ಟು ಸಂಕೀರ್ಣವಾದ ಬಂಧವುಳ್ಳದ್ದಲ್ಲ. ಸಮಸ್ಯೆಯೊಂದನ್ನು ಸರಳರೇಖಾತ್ಮಕವಾಗಿ , ಸಹಜವಾಗಿ ಚಿತ್ರಿಸುತ್ತದೆ. ಇದರ ಪ್ರಯೋಗ ನಡೆದ ಮಾಹಿತಿ ಇದುವರೆಗೂ ದೊರಕಿಲ್ಲ .

1875 **ರಲ್ಲಿ ಪ್ರಕಟವಾದ ವಿವಾಹ**ವೆಂಬ ಇನ್ನೊಂದು ನಾಟಕ ದೊರಕಿದೆ.[5] ಇದು ಸ್ವತಂತ್ರ ನಾಟಕವಾಗಿ ಪ್ರಕಟಗೊಂಡಿಲ್ಲ . ವಿವಾಹವನ್ನು ಕುರಿತಾದ ಗ್ರಂಥ ತ್ರಯಗಳಲ್ಲಿ ಮೊದಲನೆಯ ಭಾಗವಾಗಿದೆ. ಮೊದಲನೇ ಭಾಗ ನಾಟಕ ರೂಪದಲ್ಲಿದ್ದರೆ ಮುಂದಿನ ಎರಡು ಭಾಗಗಳು ಲೇಖನದ ರೂಪದಲ್ಲಿವೆ . ಈ ಗ್ರಂಥತ್ರಯದ ಪೀಠಿಕಾ ಭಾಗದಲ್ಲಿ ಇದರ ಉದ್ದೇಶವನ್ನು ಈ ರೀತಿ ಹೇಳಲಾಗಿದೆ . 'ದಂಪತಿಗಳ ಧರ್ಮವನ್ನು, ಹೆತ್ತವರಿಗೂ ಮಕ್ಕಳಿಗೂ ಇರುವ ಪರಸ್ಪರ ಧರ್ಮವನ್ನು  ವರ್ಣಿಸಿ ಬೋಧಿಸುವ ಗ್ರಂಥತ್ರಯ'

ಈ ಗ್ರಂಥತ್ರಯದಲ್ಲಿ ಮೊದಲ ಭಾಗ 'ವಿವಾಹ ' ಕುರಿತಾದದ್ದು ಎರಡನೇ ಭಾಗ Husband and wife  ಅಂದರೆ ಗೃಹಾಸ್ಥಾಶ್ರಮ ಧರ್ಮದ ವಿಷಯವಾಗಿದ್ದು ಮೂರನೇ ಭಾಗ Parents and Children ಅಂದರೆ 'ಹೆತ್ತವರಿಗೂ ಮಕ್ಕಳಿಗೂ ಇರುವ ಪರಸ್ಪರ ಧರ್ಮವನ್ನು ಕುರಿತಾದ್ದು' .

ಸಂಪಾದಕರ ಅಭಿಮತದಂತೆ ಇದರ ಲೇಖಕರು ಇಬ್ಬರು, ಇದರಲ್ಲಿ ಒಬ್ಬರು **ಉತ್ತರ ಕನ್ನಡದ ಕರ್ಕಿಯ ಕೃಷ್ಣಾಚಾರ್ಯ** ಮುಂದೆ ಮತಾಂತರ ಹೊಂದಿ ಕ್ರಿಸ್ತಾನುಜ  ಎಂದು ನಾಮಕರಣಗೊಂಡವರು.  ಇನ್ನೊಬ್ಬರು ಗದಗದ ಬೆಟಗೇರಿಯ ಆನಂದಪ್ಪ ಎಂಬ ಅಕ್ಕಸಾಲಿಗರ ಮಗ ಇವರೂ ಮತಾಂತರ ಹೊಂದಿ ಸಲೋಮ ಭಾಸ್ಕರ ಎಂದು ನಾಮಕರಣಗೊಂಡವರು .

ನಾಟಕ ಗ್ರಂಥಸ್ಥ ಭಾಷೆಯಲ್ಲಿದೆ. ಅದರಲ್ಲಿ ಆಡುಮಾತಿನ ಹಲವಾರು ನುಡಿಗಟ್ಟುಗಳು ಬಳಕೆಯಾಗಿವೆ. **ಪರಂತು , ಬಚಾಯಿಸಿ** ಮುಂತಾದ ಉತ್ತರ ಕನ್ನಡದ ಭಾಷೆಯ ಪದಗಳೂ ಸೇರಿಕೊಂಡಿವೆ. ಉತ್ತರ ಕರ್ನಾಟಕದ ಧಾರವಾಡ – ಗದಗದ  ಬಳಕೆಯಲ್ಲಿರುವ ಮರಾಠಿ ಮಿಶ್ರಿತ ಕನ್ನಡ ಭಾಷೆಯನ್ನು ಬಳಸಿಕೊಂಡು ಸರಳ ವಿವಾಹದ ಅನುಕೂಲತೆಯನ್ನು ಮನದಟ್ಟು ಮಾಡಿಕೊಡಲು ಯತ್ನಿಸುವ ಈ ನಾಟಕ ಮದುವೆಯ ದುಂದುಗಾರಿಕೆಯಿಂದ ದಿವಾಳಿಯಾದ ನೌಕರನ ಕಥೆಯನ್ನು ಸಾದರಪಡಿಸುತ್ತದೆ. ನಾಟಕದ ಆರಂಭದಲ್ಲಿ "ಯಾವಾತನು ಅವಿಚಾರದಿಂದ ನಡಿಯುತ್ತಾನೋ ಅವನು ವಿಪತ್ತಿನಲ್ಲಿ ಬೀಳುತ್ತಾನೆ. ತಸ್ಮಾತ್ ಪ್ರಾಣಸಂಕಟದಲ್ಲಿ ಬಿದ್ದರೂ ವಿಚಾರದಿಂದಲೇ ನಡಿಬೇಕು"  ಎಂಬ ಹಿತೋಕ್ತಿ ಬರುತ್ತದೆ. ಉಪದೇಶಾತ್ಮಕ  ಶೈಲಿಯ ಭಾಷಣಗಳ ಆರಂಭಕ್ಕೆ ಬರುವ ಶ್ಲೋಕದಂತೆ ಇಲ್ಲೂ ಶ್ಲೋಕವಿದೆ. ಮುಕ್ತಾಯದಲ್ಲಿ ಸಾರಾಂಶ ಎಂಬ ತಲೆಬರಹದಡಿ ಮೂರು ಬುದ್ಧಿವಾದಗಳನ್ನು ನೀಡಿ 'ಮನಮುಟ್ಟಿ ಓದಿಕೊಂಡ ವಿಚಾರ ಬುದ್ಧಿಶಾಲಿಗಳಿಗೆ ಈ ಗ್ರಂಥದಲ್ಲಿ ಮೂರು ಬುದ್ಧಿವಾದ **ವಿಶೇಷಗಳು ತೋರದೇ ಹೋಗಿರಲಿಕ್ಕಿಲ್ಲ**' ಎಂಬ ಮಾತನ್ನು ಹೇಳಲಾಗಿದೆ. ಇವನ್ನು ಗಮನಿಸಿದರೆ ಈ ಕೃತಿಕಾರರಿಗೆ ನಾಟಕವನ್ನೇ ಬರೆಯುವ ಉದ್ದೇಶವಿರುವುದು ಸಂದೇಹಾಸ್ಪದವಾಗಿದೆ, ದಾಂಪತ್ಯಕ್ಕೆ ಸಂಬಂಧಿಸಿದ ಲೇಖನಗಳನ್ನು ಬರೆಯುವುದು ಅದರ ಉದ್ದೇಶವಾಗಿದ್ದು , ಆ ಕಾಲದಲ್ಲಿ ಜನಪ್ರಿಯವಾಗುತ್ತಿರುವ ನಾಟಕ ಪ್ರಕಾರವನ್ನು ನೋಡಿ ಅದರ ಮೊದಲ ಭಾಗವನ್ನು ಸಂಭಾಷಣಾ ರೂಪದಲ್ಲಿ ಇಟ್ಟಿದ್ದಾರೆ ಎನಿಸುವುದು.

## ಆಧಾರ ಪಠ್ಯ


1. ಶ್ರೀನಿವಾಸ ಹಾವನೂರು : ಹೊಸಗನ್ನಡದ ಅರುಣೋದಯ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ : 1974.
2. ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ , ಕನ್ನಡ ಅಧ್ಯಯನ ಸಂಸ್ಥೆ . ಮೈಸೂರು ವಿಶ್ವವಿದ್ಯಾಲಯ , 1974. ಪು. 289
3. ಸುಬ್ಬಣ್ಣ .ಕೆ.ವಿ. : ಆಧುನಿಕ ಕನ್ನಡ ನಾಟಕ ಮತ್ತು ರಂಗಭೂಮಿ (ಲೇ): ನಾಟಕ ಕರ್ನಾಟಕ ರಂಗ ಕೈಪಿಡಿ : ಕರ್ನಾಟಕ ಸರ್ಕಾರ
4. ಅದ್ಯ ರಂಗಾಚಾರ್ಯ : ಕನ್ನಡ ರಂಗಭೂಮಿಯ ಪುರೋಭಿವೃದ್ಧಿ: ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ : 1968
5. ಶ್ರೀಧರ .ಎಚ್.ಜಿ(ಸಂ) _ 'ವಿವಾಹ' : ಕನ್ನಡ ಸಂಘ ವಿವೇಕಾನಂದ ಕಾಲೇಜು ಪುತ್ತೂರು ದ.ಕ. : 1998

# 2. ನಾಟಕಕಾರ ಶ್ರೀ ಜಿ.ಜಿ.ಹೆಗಡೆ

ವ್ಯವಸಾಯಿ ರಂಗಭೂಮಿಯ ನಾಟಕಕಾರರೆಂದರೆ ಯಕ್ಷಗಾನದ ಪ್ರಸಂಗಕರ್ತರಂತೆ – ರಂಗಭೂಮಿಯ ಅಜ್ಞಾತಪೋಷಕರು. ಮುನ್ನೆಲೆಯ ದೃಶ್ಯ ವೈಭವ ಮತ್ತು ತಾರಾಮೌಲ್ಯವುಳ್ಳ ಕಲಾವಿದರು ಬೆಳಗಿದಷ್ಟೂ ಹಿನ್ನೆಲೆಯ ಕತ್ತಲಲ್ಲಿ ಕರಗಿಹೋಗುವವರು ಈ ಲೇಖಕರು. ಗಂಗಾಧರ ಗೋಪಾಲಕೃಷ್ಣ ಹೆಗಡೆಯವರು ಇಂತಹ ಒಬ್ಬ ಲೇಖಕರು. ಮೂವತ್ತರ ದಶಕದ ಉತ್ತರಕರ್ನಾಟಕದ ವೃತ್ತಿ ರಂಗಭೂಮಿಯ ಅಜ್ಞಾತ ಪೋಷಕರಲ್ಲಿ ಇವರೂ ಒಬ್ಬರು. ಆ ಕಾಲದ ಹಲವಾರು ಕಂಪನಿಗಳಿಗೆ ಇವರು ಅತ್ಯಂತ ಪ್ರಿಯರಾಗಿದ್ದರು. ಕಂಪನಿಗಳಿಗಾಗಿ ನಾಟಕ ಬರೆಯುತ್ತಲೇ ಪ್ರಯೋಗ ರಂಗಭೂಮಿಯ ಹಲವಾರು ಸಾಧ್ಯತೆಗಳನ್ನು ಆ ಕಾಲದಲ್ಲೇ ತನ್ನ ನಾಟಕದ ಮೂಲಕ ತೋರ್ಪಡಿಸಿದ್ದರಿಂದ ಶ್ರೀ ಜಿ.ಜಿ.ಹೆಗಡೆಯವರ ನಾಟಕಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಜಿ.ಜಿ.ಹೆಗಡೆಯವರು ಯಲ್ಲಾಪುರದಿಂದ ಶಿರಸಿಗೆಬಂದು ನೆಲೆಸಿದ ಸ್ಥಿತಿವಂತ ಕುಟುಂಬವೊಂದರಲ್ಲಿ 1911ರಲ್ಲಿ ಜನಿಸಿದರು. ಅವರು ಔಪಚಾರಿಕ ಶಿಕ್ಷಣ ಪಡೆದಿದ್ದು ಎಸ್ಸೆಸ್ಸೆಲ್ಸಿವರೆಗೆ ಮಾತ್ರ. ಮುಂದೆ ಖ್ಯಾತ ವಿಚಾರವಾದಿ, ನಾಟಕಕಾರ ಪಂಡಿತ ತಾರಾನಾಥರ ಶಿಷ್ಯರಾಗಿ 'ಪ್ರೇಮಾತನಯ'ಆಶ್ರಮದಲ್ಲಿ ಪತ್ರಿಕೋದ್ಯಮದ ತರಬೇತಿ ಪಡೆದರು. ರಂಗಭೂಮಿಯಲ್ಲಿ ಅವರ ಆಸಕ್ತಿಮೂಡಿದ್ದು ಅದೇಕಾಲದಲ್ಲಿದ್ದೀತು. 'ತರುಣ ಕರ್ನಾಟಕ'ದ ಸಂಪಾದಕರಾಗಿ, 'ನವಜೀವನ', 'ಕರ್ಮವೀರ' ಮೊದಲಾದ ಪತ್ರಿಕೆಗಳ ಉಪಸಂಪದಕರಾಗಿ ದೀರ್ಘಕಾಲ ಪತ್ರಿಕೋದ್ಯಮದಲ್ಲಿದ್ದ ಹೆಗಡೆಯವರು 'ಒಂದಾಣೆಗ್ರಂಥಮಾಲೆ'ಯನ್ನು ಕೆಲಕಾಲ ನಡೆಸಿ ಪ್ರಕಾಶಕರೂ ಆದರು. ಈ ನಡುವೆ ಆಕಾಶವಾಣಿಗಾಗಿ ಇಪ್ಪತ್ತಕ್ಕೂ ಹೆಚ್ಚು ಏಕಾಂಕಗಳನ್ನು ಬರೆದರು.

1934ರಲ್ಲಿ ಅವರ ಮೊಟ್ಟಮೊದಲ ಪೂರ್ಣಪ್ರಮಾಣದ ನಾಟಕ '**ಕೆಸರಿನಲ್ಲಿ ಕಮಲ**' ಭೀಮರಾವ್ ಹೂಗಾರರ '**ಭಾಗ್ಯೋದಯನಾಟಕ ಮಂಡಳಿ**'ಯ ಆ ವರ್ಷದ ಪ್ರಮುಖ ನಾಟಕವಾಗಿ ರಂಗಕ್ಕೆ ಬಂತು. ಮುಂದಿನ ನಾಲ್ಕಾರು ವರ್ಷಗಳಲ್ಲಿ ಅವರು ಸಿದ್ದರಾಮಪ್ಪನವರ 'ವಿಶ್ವರಂಗ ನಾಟಕಮಂಡಳಿ'ಗಾಗಿ '**ಕುರುಕ್ಷೇತ್ರ**', '**ಹರಿಶ್ಚಂದ್ರ**', '**ಧ್ರುವತಾರಾ**', '**ಪುಂಡಲೀಕ**' ನಾಟಕಗಳನ್ನು ಬರೆದರು. ಈ ನಾಲ್ಕು ಪೌರಾಣಿಕ ನಾಟಕಗಳು ಅಪಾರ ಜನಮೆಚ್ಚುಗೆ ಪಡೆದವು.

ಅದೇ ದಶಕಾಂತ್ಯದಲ್ಲಿ ಏಣಗಿ ಬಾಳಪ್ಪನವರ 'ಕಲಾವೈಭವ ನಾಟ್ಯಸಂಘ'ದೊಡನೆ ಅವರ ಸಂಪರ್ಕ ಬೆಳೆಯಿತು. ಕಲಾವೈಭವಕ್ಕಾಗಿ ಅವರು '**ಅಹಲ್ಯೋದ್ಧಾರ**', '**ದಾರಿದೀಪ**', '**ಅತ್ತಿಗೆ**', '**ಚಲೇಜಾವ್**' ಮೊದಲಾದ ನಾಟಕಗಳನ್ನು ಬರೆದರು.

ಮೂವತ್ತರ ದಶಕದ ಉತ್ತರಕರ್ನಾಟಕದ ಇನ್ನಿತರ ಜನಪ್ರಿಯ ಕಂಪನಿ ನಾಟಕಗಳೊಂದಿಗೆ ಹೋಲಿಸಿದರೆ ಹೆಗಡೆಯವರ ನಾಟಕಗಳು ಸಾಕಷ್ಟು ವಿಭಿನ್ನವಾಗಿ ಕಾಣುತ್ತದೆ. ಸಂಗೀತದ ಮೇಲಾಟ ಹಾಗೂ ಭಾವೋದ್ವೇಗದ ಭಾಷಣಗಳಲ್ಲಿ ಗದ್ದಲದ ಸಂತೆಯಾಗುತ್ತಿದ್ದ ನಾಟಕಗಳನಡುವೆ ಸಂಗೀತದ ಆಂಶಿಕ ನೆರವನ್ನಷ್ಟೇ ಪಡೆದು ಚುರುಕಾದ ಸಂಭಾಷಣೆ ಹಾಗೂ ಕ್ರಿಯೆಗಳ ಮೂಲಕ ನಾಟಕವನ್ನು ಕಟ್ಟುವ ಹೊಸ ಅಲೆಯನ್ನು ಸ್ವಾಗತಿಸಿ ರೂಪಿಸಿದವರಲ್ಲಿ ಜಿ.ಜಿ.ಹೆಗಡೆಯವರೂ ಒಬ್ಬರು.

ಜಿ.ಜಿ.ಹೆಗಡೆಯವರ ನಾಟಕಗಳೆಲ್ಲ ಒಂದು ದೃಷ್ಟಿಯಿಂದ ಪುನರ್ಲೇಖನಗಳಾಗಿವೆ. ಅಂದರೆ, ಅವರು ತಮ್ಮ ನಾಟಕಗಳಿಗಾಗಿ ಜನಪ್ರಿಯ ಕಂಪನಿ ನಾಟಕಗಳ ಕಥಾವಸ್ತುವನ್ನೇ ಆಯ್ದುಕೊಂಡರು. ಉದಾಹರಣೆಗೆ ಅವರು ಸಿದ್ದರಾಮಪ್ಪನವರ ಕಂಪನಿಗಾಗಿ '**ಕುರುಕ್ಷೇತ್ರ**'ಬರೆದಾಗ ಗುಬ್ಬಿ ಕಂಪನಿಯವರು ಅದ್ಧೂರಿಯಾಗಿ ಪ್ರದರ್ಶಿಸುತ್ತಿದ್ದ ಪುಟ್ಟಸ್ವಾಮಯ್ಯನವರ 'ಕುರುಕ್ಷೇತ್ರ'ವೂ, ಬೆಳ್ಳಾವೆ ನರಹರಿಶಾಸ್ತ್ರಿಗಳ 'ಕುರುಕ್ಷೇತ್ರ'ವೂ ಮನೆಮಾತಾಗಿದ್ದವು. ಇದೇರೀತಿ 'ಧ್ರುವತಾರಾ', 'ಪುಂಡಲೀಕ', 'ಹರಿಶ್ಚಂದ್ರ' ಹೀಗೆ ಜನಪ್ರಿಯ ಪೌರಾಣಿಕ ಕಥಾವಸ್ತುವನ್ನು ಆಯ್ದುಕೊಂಡು, ತಾನು ಯಾವ ಕಂಪನಿಗಾಗಿ ಬರೆಯುತ್ತಿದ್ದೇನೋ ಅದರ ಅಗತ್ಯವನ್ನೆಲ್ಲ ಗಮನದಲ್ಲಿಟ್ಟುಕೊಂಡು ಅವರು ನಾಟಕ ರಚಿಸಿದರಾದರೂ ಕಂಪನಿ ನಾಟಕಗಳ ಎಂದಿನ ತಾಂತ್ರಿಕ ಕಸರತ್ತುಗಳಿಗೆ, ರಮ್ಯಾದ್ಭುತ ಆಕಸ್ಮಿಕ ಘಟನಾವಳಿಗೆ, ನೀತಿಪ್ರತಿಪಾದನೆಗೆ, ದುಷ್ಟ ಪಾತ್ರಗಳ ಉದಾತ್ತೀಕರಣಕ್ಕೆ ಅವರ ನಾಟಕಗಳಲ್ಲಿ ಅವಕಾಶ ಕೊಡಲಿಲ್ಲ. ಪುರಾಣಗಳ ಕಥಾ ದೃಶ್ಯಗಳಲ್ಲಿ ಹೆಚ್ಚಿನ ಮಾರ್ಪಾಡು ಕೂಡ ಮಾಡಿಕೊಳ್ಳದೇ ಅವರು ಬಳಸಿಕೊಂಡರು.

ಆದರೆ ಪುರಾಣದ ಜಗತ್ತಿಗೆ ಸೇರಿದ ನಾಯಕ ಪಾತ್ರಗಳಿಗೆ ಸಂವಾದಿಯಾದ ಗೌಣಪಾತ್ರಗಳ ಪ್ರಪಂಚವನ್ನು ಸೃಷ್ಟಿಸಿಕೊಳ್ಳುವಮೂಲಕ ಪೌರಾಣಿಕ ಕಥಾವಸ್ತುವನ್ನು ವಿರೂಪಗೊಳಿಸದೇ ಹೊಸಕಾಲಕ್ಕೆ ಹೊಂದಿಸಿಕೊಳ್ಳುವ ಕ್ರಮವನ್ನು ಅವರು ಅನುಸರಿಸಿದರು. ತಾವೇ ಸೃಷ್ಟಿಸಿದ ಈ ಗೌಣಪಾತ್ರಗಳ ಜಗತ್ತಿನಲ್ಲಿ ಅವರು ಸಾಕಷ್ಟು ಸ್ವಾತಂತ್ರ್ಯವಹಿಸಿ ಹೊಸಕಾಲಕ್ಕೆ ಬೇಕಾದ ವಿಚಾರಗಳಿಗೆ ಮಾತುಕೊಟ್ಟರು.

ಅವರ ನಾಟಕಗಳಲ್ಲಿ ಪೌರಾಣಿಕ ಜಗತ್ತಿಗೆ ಸೇರಿದ ನಾಯಕ ಪಾತ್ರಗಳು ವೈಭವೀಕರಿಸುವ ಮೌಲ್ಯಗಳನ್ನು ಗೌಣಪಾತ್ರಗಳು ತಮ್ಮದೇ ಜಗತ್ತಿನಲ್ಲಿ ಪುನರಭಿನಯಿಸುತ್ತವೆ. ಆ ಮೂಲಕ ವೈಭವೀಕರಣಗೊಂಡ ಮೌಲ್ಯಗಳನ್ನು ಟೀಕಿಸುತ್ತವೆ ; ಯಕ್ಷಗಾನದಲ್ಲಿ ನಾಯಕ ಪಾತ್ರದ ಕುಣಿತವನ್ನು ಚಾರಕನ ಕುಣಿತ ಅಣಕಿಸುವಂತೆ. ಉದಾಹರಣೆಗೆ 'ಕುರುಕ್ಷೇತ್ರ'ದ ಕರ್ಣ ತಾನು ಆಡಿದ ಮಾತು ಉಳಿಸಿಕೊಳ್ಳಲು ಪ್ರಾಣಕೊಟ್ಟರೆ, ಗೌಣಪಾತ್ರಗಳ ಜಗತ್ತಿನಲ್ಲಿ 'ಮೋಸದಿಂದ ಪಡೆದುಕೊಂಡ ವಚನವನ್ನು ನಡೆಸಿಕೊಡಬೇಕಾಗಿಲ್ಲ'ವೆಂದು ತೀರ್ಮಾನವಾಗುತ್ತದೆ.

ಪೌರಾಣಿಕ ಕಥಾ ದೃಶ್ಯವನ್ನು ವಿರೂಪಗೊಳಿಸದೆ ವಿಮರ್ಶೆಗೊಳಪಡಿಸುವುದರೊಂದಿಗೆ ಸಮಕಾಲೀನ ರಾಜಕೀಯ ತಿಳುವಳಿಕೆಗೆ ಮಾತುಕೊಡಲೂ ಹೆಗಡೆಯವರು ಗೌಣಪಾತ್ರಗಳ 'ಸಬ್ ಪ್ಲಾಟ'ನ್ನು ಬಳಸಿಕೊಂಡರು.

'ಧ್ರುವತಾರ'ದಲ್ಲಿ ಬರುವ ಪ್ರಭುತ್ವದ ಟೀಕೆಯಲ್ಲಿ, 'ಕುರುಕ್ಷೇತ್ರ'ದ ಅರಸುಮಕ್ಕಳ ಮತ್ಸರದ ವಿಡಂಬನೆಯಲ್ಲಿ ಸಮಕಾಲೀನ ರಾಜಕೀಯ ತಿಳುವಳಿಕೆ ಇದೆ.

'ಯಕ್ಷಗಾನದ ಹಿನ್ನೆಲೆಯಿದ್ದ ಹಾಗೂ ಆ ತಿಳುವಳಿಕೆಯನ್ನು ವೃತ್ತಿರಂಗಭೂಮಿಯ ಪೋಷಣೆಗೆ ಬಳಸಿಕೊಂಡ ಜಿ.ಜಿ.ಹೆಗಡೆಯವರು ಆ ರಂಗಕ್ಕೆ ಉತ್ತರಕನ್ನಡ ಕೊಟ್ಟ ಅಪರೂಪದ ಕೊಡುಗೆ' ಎಂದು ಶಾಂತಿನಾಥ ದೇಸಾಯಿಯವರು ಒಂದೆಡೆ ಬರೆದಿದ್ದಾರೆ. ಆದರೆ ಹೆಗಡೆಯವರ ಕೊಡುಗೆಗಳಾದ ಆ ನಾಟಕಗಳೇ ಇಂದು ಕಾಣುತ್ತಿಲ್ಲ.

## ನೆರವು

- ಡಾ.ಎಂ.ಜಿ.ಹೆಗಡೆ : 'ತೆರೆಮರೆಯ ರಂಗಪೋಷಕ, ಜಿ.ಜಿ.ಹೆಗಡೆ' (ಲೇ) : ಕಿರಣಭಟ್(ಸಂ) : 'ಉತ್ತರಕನ್ನಡ ರಂಗದರ್ಶನ' ಫೆಬ್ರವರಿ – ಮಾರ್ಚ 2002